**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 05**
**ಚಾ.ಸಾ.ಸಂಖ್ಯೆಃ 01**

## ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ

**ಎಸ್.ಸಿ.ಸಂಖ್ಯೆ 10047/2025**

| | |
|---|---|
| ಹೆಸರುಃ | ಶೇಖರ ಮೇತ್ರಿ ಅಲಿಯಾಸ ಮಾನ್ಯರು |
| ತಾಯಿಯ ಹೆಸರುಃ | ಶ್ರೀದೇವಿ |
| ವಯಸ್ಸುಃ | 37 ವರ್ಷ |
| ಉದ್ಯೋಗಃ | ಹೋಟೆಲ್ ವ್ಯಾಪಾರ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 11.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಆರೋಪಿತರ ಪರಿಚಯ ಇದೆ. ಚಾಸಾ-4 ನನ್ನ ತಾಯಿ, ಚಾಸಾ-5 ನನ್ನ ಹೆಂಡತಿ. ಚಾಸಾ-2, 3 ಹಾಗೂ 6 ರಿಂದ 11 ಇವರ ಪರಿಚಯ ಇದೆ.

2. ದಿನಾಂಕಃ 26.02.2021 ರಂದು ನಮ್ಮ ಓಣಿಯಲ್ಲಿ ಇದ್ದಾಗ ಮುತ್ತು ಮಾದರ ಚಾಸಾ-10 ಬೇಟಿಯಾಗಿದ್ದು, ಸದಾಶಿವ ಬಾಡಗಂಡಿ ಚಾಸಾ-11 ನನ್ನ ಕಡೆಯಿಂದ ಹಣ ತೆಗೆದುಕೊಂಡಿದ್ದ ಅಂತಾ ಹೇಳಿದ್ದಾನೆ. ನಾನು ಚಾಸಾ-11 ಇವರಿಗೆ ಬೇಟಿಯಾಗಿ ಅವರ ಹಣ ವಾಪಸ್ಸು ಕೊಡಲು ಹೇಳಿದೆ.

ರಾತ್ರಿ 09.00 ಗಂಟೆಯ ಅವಧಿಯಲ್ಲಿ ನಾನು ಮುಧೋಳದ ಬಸ್ ನಿಲ್ದಾಣದ ಹತ್ತಿರ ಇದ್ದಾಗ ಆರೋಪಿ 2 ಅಲ್ಲಿಗೆ ಬಂದು ಚಾಸಾ-10 ಹಾಗೂ 11 ಮುತ್ತಪ್ಪ ಹಾಗೂ ಸದಾಶಿವ ಇವರ ವ್ಯವಹಾರ ಬಗೆಹರಿಸಲು ನೀನೇನು ಹಿರಿಯನಾಗಿದ್ದೀಯಾ ಭೋಸಡಿ ಮಗನೇ ಅಂತಾ ಬೈದ್ಯು.

3. ನಾನು ನಂತರ ಮನೆಗೆ ಹೋಗಿ ನನ್ನ ತಾಯಿ ಚಾಸಾ-4 ಇವರಿಗೆ ಈ ವಿಷಯ ತಿಳಿಸಿದೆ. ಚಾಸಾ-4 ಈ ಬಗ್ಗೆ ಬಸಪ್ಪ ಮೇತ್ರಿ, ಗಣೇಶ ಮೇತ್ರಿ, ಸದಾಶಿವ ಮೇತ್ರಿ, ಭೀಮಶಿ ಮೇತ್ರಿ ಇವರಿಗೆ ವಿಷಯ ತಿಳಿಸಿದರು. ಅವರು ಸಾಯಂಕಾಲ ಈವಿಷಯದ ಬಗ್ಗೆ ಮಾತನಾಡುತ್ತೇವೆ ಅಂತಾ ಹೇಳಿದರು.

4. ದಿನಾಂಕಃ 27.02.2021 ರಂದು ಮದ್ಯಾಹ್ಞ 02.30 ಗಂಟೆಗೆ ನಾನು ಮನೆಯಲ್ಲಿ ಮಲಗಿರುವಾಗ ನಮ್ಮ ತಾಯಿ ಚೀರಿದ ಶಬ್ದ ಕೇಳಿ ನಾನು ಎದ್ದು ಬಂದೆ. ಬಂದು ನೋಡಿದಾಗ ಈಗ ನ್ಯಾಯಾಲಯದ ಮುಂದಿರುವ 4 ಜನ ಆರೋಪಿತರು ನಮ್ಮ ಮನೆಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದರು. ಆರೋಪಿ ಗಣೇಶ ನನ್ನ ತಾಯಿ ಚಾಸಾ-4 ಇವರನ್ನು ಕೆಳಕ್ಕೆ ಕೆಡವಿ ಹೊಡೆಯುತ್ತಿದ್ದ. ಆರೋಪಿ ಕಾಳಪ್ಪ ಅವಳಿಗೆ ಒದೆಯುತ್ತಿದ್ದ. ಆರೋಪಿ ಆನಂದ ಹಾಗೂ ಅರುಣ ಇವರು ನನ್ನನ್ನು ನೋಡಿ "ಈ ಭೋಸಡಿ ಮಗ ಇಲ್ಲಿಯೇ ಇದ್ದಾನೆ ಬಿಡುವುದು ಬೇಡ" ಅಂತಾ ಹೇಳಿ ನನಗೆ ಹೊಡೆದರು.

5. ನಂತರ ಆರೋಪಿ ಕಾಳಪ್ಪ ಕಟ್ಟಿಗೆಯಿಂದ ನನಗೆ ಹೊಡೆದ. ಆರೋಪಿ ಗಣೇಶ ನನ್ನ ಹೊಟ್ಟೆಗೆ ಗುದ್ದಿದ. ಆಗ ಓಣಿಯವರಾದ ಚಾಸಾ-6 ಹಾಗೂ 7 ಜಗಳ ಬಿಡಿಸಿದರು. ಆಗ ಆರೋಪಿತರು "ಮಂದಿ ಬಿಡಿಸಿದ್ದಾರೆ ಅಂತಾ ಉಳಿದಿರಿ ಭೋಸಡಿ ಮಕ್ಕಳಿರಾ, ಇಲ್ಲದಿದ್ದಲ್ಲಿ ಇದೇ ಬಡಿಗೆಯಿಂದ ಬಡಿದು ಕೊಲ್ಲುತ್ತಿದ್ದೆವು" ಅಂತಾ ಹೆದರಿಸಿದರು. ಬಡಿಗೆಯನ್ನು ಅಲ್ಲಿಯೇ ಒಗೆದು ಹೋದರು. ನಂತರ ನಾನು ಹಾಗೂ ನನ್ನ ತಾಯಿ ಚಾಸಾ-4 ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಹೋದೆವು. ಚಿಕಿತ್ಸೆ ಪಡೆದ ನಂತರ ನಾವು ಪೋಲೀಸ ಠಾಣೆಗೆ ಬಂದು ದೂರು ನೀಡಿದೆ.

6. ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿದ ದೂರು ಇರುತ್ತದೆ. ಅದಕ್ಕೆ ನನ್ನ ಸಹಿ ಇದೆ. (ಸದರಿ ದೂರನ್ನು ನಿಪಿ-11 ಅಂತಾ, ಸಾಕ್ಷಿದಾರರ ಸಹಿಯನ್ನು ನಿಪಿ-11(ಎ) ಅಂತಾ ಗುರುತಿಸಲಾಯಿತು.)

7. ದಿನಾಂಕಃ 28.02.2021 ರಂದು ಮತ್ತೆ ಪೋಲೀಸ ಠಾಣೆಗೆ ಹೋಗಿ, ದಿನಾಂಕಃ 27.02.2021 ರಂದು ಗಡಿಬಿಡಿಯಲ್ಲಿ ಕೆಲವು ವಿಷಯ ಬರೆಸಿಲ್ಲ ಅಂತಾ ಈಗ ನೋಡುತ್ತಿರುವ ಮತ್ತೊಂದು ದೂರು ನೀಡಿದೆ. ಅದಕ್ಕೆ ನನ್ನ ಸಹಿ ಇದೆ. (ಅದನ್ನು ನಿಪಿ-12 ಅಂತಾ, ಸಾಕ್ಷಿದಾರರ ಸಹಿಯನ್ನು ನಿಪಿ-12(ಎ) ಅಂತಾ ಗುರುತಿಸಲಾಯಿತು.) ನನಗೆ ಕೈನೋವಾಗಿದ್ದರಿಂದ ಚಾಸಾ-9 ಮಂಜುನಾಥ ಹಿರ್ಲಕ್ಕಿ ದೂರುಗಳನ್ನು ಬರೆದಿದ್ದಾರೆ. ಈಗ ನಾನು

ನೋಡುತ್ತಿರುವ ಮು.ಮಾ. 1 ಆರೋಪಿತರು ನನಗೆ ಹೊಡೆಯಲು ಉಪಯೋಗಿಸಿದ ಬಡಿಗೆ ಇರುತ್ತದೆ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ**

1. ಆರೋಪಿ 1 ಗಣೇಶ ಈ ಸಂಜೆ ಎನ್ನುವ ಪತ್ರಿಕೆಯ ವರದಿಗಾರರು ಎಂದರೆ ಸರಿ. ಅವರು ನ್ಯಾಯಕ್ಕೆ ರಕ್ಷೆ ಎನ್ನುವ ಪತ್ರಿಕೆಗೆ ಉಪಸಂಪಾದಕರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕಾರ್ಯಕರ್ತರು ಅಂತಾ ಕೆಲಸ ಮಾಡುತ್ತಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಒಬ್ಬ ಸುನೀಲ ಕಂಬೋಗಿ ಎನ್ನುವವರು ಭೀಮ ಆರ್ಮಿ ಮೂಲ ನಿವಾಸಿ ಏಕತಾ ಪರಿಷತ್ ಎನ್ನುವ ಸಂಘಟನೆಯ ಸಂಸ್ಥಾಪಕರು ಎಂದರೆ ಸರಿ.

2. ನಾನು ಭೀಮ ಆರ್ಮಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಬಿ.ಜೆ.ಪಿ. ಪಕ್ಷದ ಕಾರ್ಯಕರ್ತ ಎಂದರೆ ಸರಿ. ನನಗೆ ಗೋವಿಂದ ಕಾರಜೋಳ ಇವರ ಪುತ್ರನ ಜೊತೆಗೆ ನಿಕಟ ಸ್ನೇಹವಿದೆ ಎಂದರೆ ಸರಿಯಲ್ಲ. ಅವರ ಪ್ರತಿಯೊಂದು ಕಾರ್ಯ ಕಟ್ಟಡಗಳಲ್ಲಿ ಭಾಗವಹಿಸುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಕೆಲವು ಫೋಟೋಗಳನ್ನು ತೋರಿಸಲಾಗಿ ತಾವು ಸದರಿ ಫೋಟೋಗಳಲ್ಲಿ ತಾನು ಇರುವುದಾಗಿ ತನ್ನನ್ನು ಬೇರೆಯವರು ಕರೆದುಕೊಂಡು ಹೋಗಿದ್ದರು ಅಂತಾ ಹೇಳುತ್ತಾರೆ. (ಸಾಕ್ಷಿದಾರರು

ಒಪ್ಪಿದ್ದರಿಂದ ಸದರಿ ಫೋಟೋಗಳನ್ನು ನಿಡಿ-1 ರಿಂದ 4 ಅಂತಾ ಗುರುತಿಸಲಾಯಿತು.)

3. ಆರೋಪಿ 1 ಗೋವಿಂದ ಕಾರಜೋಳ ಅವರ ವಿರುದ್ಧ ಅನೇಕ ಲೇಖನಗಳನ್ನು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಬ್ಬ ಹನಮಂತ ವಸಂತ ಶಿಂಧೆ ಎನ್ನುವವರು ಲೋಕಾಯುಕ್ತ ಠಾಣೆಯಲ್ಲಿ ಕಾರಜೋಳ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದ್ದು ಆ ಬಗ್ಗೆ ಕೂಡ ಆರೋಪಿ 1 ಪತ್ರಿಕೆಯಲ್ಲಿ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದಾಗಿ ಆರೋಪಿ 1 ಇವರ ವಿರುದ್ಧ 2013 ರಿಂದ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ.

4. ಚಾಸಾ-11 ಚಾಸಾ-10 ಇವರಿಗೆ ರೂ.50,000/- ಜಣ ಕೊಡಬೇಕಾಗಿತ್ತು. ನಾನು ಈ ವ್ಯವಹಾರ ನಡೆಯುವ ಮುಂದೆ ಇರಲಿಲ್ಲ. ನಾನು ನಮ್ಮ ಓಣಿಯಲ್ಲಿಯ ಹಿರೇತನ ಮಾಡುವುದಿಲ್ಲ. ಚಾಸಾ-10 ಹಾಗೂ 11 ಇವರ ನಡುವೆ ಯಾವುದೇ ಹಣಕಾಸು ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ 2 ಹನಮಂತ ಮೇತ್ರಿ ಇವರ ಪರವಾಗಿ ಚಾಸಾ-11 ಇವರಿಗೆ ಹಣ ಕೇಳಲು ಹೋಗಿದ್ದರು ಎಂದರೆ ಸರಿಯಲ್ಲ. ಆಗ ನಾನು ಚಾಸಾ-11 ಸದಾಶಿವ ಇವರ ಪರವಾಗಿ ಹೋಗಿದ್ದೆ ಎಂದರೆ ಸರಿಯಲ್ಲ. ರಾತ್ರಿ 09.00 ಗಂಟೆಯ ಸಮಯದಲ್ಲಿ ನನ್ನೊಂದಿಗೆ ಚಾಸಾ-11 ಇರಲಿಲ್ಲ.

5. ದಿನಾಂಕಃ 26.02.2021 ರಂದು ನಾನು ಆರೋಪಿ 2 ಕಾಳಪ್ಪ ಇವರಿಗೆ ಚಾಕುವಿನಿಂದ ಗಲ್ಲಕ್ಕೆ ಹಲ್ಲೆ ಮಾಡಿದ್ದೆ ಎಂದರೆ ಸರಿಯಲ್ಲ. ಆ ದಿನದಿಂದ ದಿನಾಂಕಃ 04.03.2021 ರ ವರೆಗೆ ಕುಬಸದ ಆಸ್ಪತ್ರೆಯಲ್ಲಿ ಕಾಳಪ್ಪ ಸೇರ್ಪಡೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಚಾಸಾ-4 26 ನೇ ತಾರೀಕಿನ ವಿಷಯವನ್ನು ಹಿರಿಯರಿಗೆ ಹೇಳಲು 27 ನೇ ತಾರೀಖು ಬೆಳಗಿನ 11.00 ಗಂಟೆಗೆ ಹೋಗಿದ್ದರು.

6. ಅವರು ಆರೋಪಿ 1 ಇವರ ಮನೆಗೆ ಹೋಗಿದ್ದರು. ಆರೋಪಿ 1 ನಾನು ಹಲ್ಲೆ ಮಾಡಿರುವುದು ತಪ್ಪು ಇದೆ ಅಂತಾ ಹೇಳಿದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಹೊಟ್ಟೆಗೆ, ಕುತ್ತಿಗೆಗೆ ಹಾಗೂ ಮೊಣಕಾಲಿಗೆ ಗಾಯಗಳಾಗಿದ್ದವು. ರಕ್ತ ಗಾಯಗಳಾಗಿರಲಿಲ್ಲ. ನನಗೆ ಎರಡೂ ಮುಂಗೈಗಳಿಗೆ, ಹೊಟ್ಟೆಗೆ ಗಾಯಗಳಾಗಿದ್ದವು. ಬಡಿಗೆಯಿಂದ ನನಗೆ ಮೊಣಕೈಗೆ ಹೊಡೆದಿದ್ದರು. ಒಳಪೆಟ್ಟು ಆಗಿದ್ದವು.

7. ನಾವು ಆಸ್ಪತ್ರೆಗೆ ಹೋದಾಗ ಸಾಯಂಕಾಲ 06.00 ಗಂಟೆಯಾಗಿತ್ತು. ಚಾಸಾ-9 ನಮ್ಮನ್ನು ಆಸ್ಪತ್ರೆಗೆ ಮೋಟಾರು ಸೈಕಲ್ ಮೇಲೆ ಕರೆದುಕೊಂಡು ಹೋದರು. ನಾನು ನನಗೆ ಆದ ಗಾಯಗಳ ಬಗ್ಗೆ ವೈದ್ಯರಿಗೆ ತೋರಿಸಿದ್ದೇನೆ.

ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ. ಆರೋಪಿ 2 ನನ್ನ ವಿರುದ್ಧ ಹಾಗೂ ಚಾಸಾ-6 ರಿಂದ 8 ಮತ್ತು ಇತರರಾದ ಸುನೀಲ ಕಂಬೋಗಿ, ಚಂದ್ರಕಾಂತ ಮೇತ್ರಿ ಇವರ ವಿರುದ್ಧ ಸಿ.ಸಿ. ನಂ. 121/2022 ನೇದ್ದರಲ್ಲಿ ಪ್ರಕರಣ ದಾಖಲಿಸಿದ್ದ ಎಂದರೆ ಸರಿ.

8. ಆರೋಪಿ 2 ಗಾಯಗೊಂಡು ಆಸ್ಪತ್ರೆಯಲ್ಲಿರುವಾಗ ನಾನು ರಾಜಕೀಯದವರ ಶಿಫಾರಸ್ಸು ಪಡೆದು ಆರೋಪಿ 2 ನೀಡಿದ ದೂರು ಪಡೆಯಲಾರದಂತೆ, ಪ್ರಕರಣ ದಾಖಲಾಗದಂತೆ ನೋಡಿಕೊಂಡೆ ಎಂದರೆ ಸರಿಯಲ್ಲ. ನಾನು ರಾಜಕೀಯದ ಲಾಭ ಪಡೆದುಕೊಂಡು ಮೊದಲು ಸುಳ್ಳು ದೂರು ದಾಖಲಿಸಿದೆ ಎಂದರೆ ಸರಿಯಲ್ಲ. ನಂತರ ನನ್ನ ವಿರುದ್ಧ ಮುಧೋಳ ಠಾಣೆಯ ಗುನ್ನಾ ನಂಬರ 37/2021 ಪ್ರಕರಣ ದಾಖಲಾಯಿತು ಎಂದರೆ ಸರಿಯಲ್ಲ. ಸದರಿ ಪ್ರಕರಣ ದಾಖಲಾಗಿದ್ದರಿಂದ ನಾನು ನಿಪಿ-12 ರಂತೆ ಮತ್ತೆ ಸುಳ್ಳು ದೂರು ನೀಡಿದೆ ಎಂದರೆ ಸರಿಯಲ್ಲ. ನಾನು ರಾಜಕೀಯದ ಲಾಭ ಪಡೆದುಕೊಂಡು ಮೊದಲು ಸುಳ್ಳು ದೂರು ದಾಖಲಿಸಿದೆ ಎಂದರೆ ಸರಿಯಲ್ಲ.

9. ಮು.ಮಾ. 1 ರಿಂದ ನನ್ನ ಮೇಲೆ ಆರೋಪಿ 2 ಹಲ್ಲೆ ಮಾಡಿದರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ನ್ನು ಕಾಳಪ್ಪನೇ ತೆಗೆದುಕೊಂಡು ಬಂದಿದ್ದ. ಆರೋಪಿ ಕಾಳಪ್ಪ ಮು.ಮಾ. 1 ರಿಂದ ನನ್ನ

ಮೊಣಕ್ಕೆ ಹಾಗೂ ಪಕ್ಕೆಗೆ ಹೊಡೆದ. ಅಲ್ಲಿ ಬಾಸುಂಡೆ ಮೂಡಿರಲಿಲ್ಲ. ಆರೋಪಿ ನನಗೆ ಜೋರಾಗಿ ಹೊಡೆದಿದ್ದ. ನನ್ನ ತಾಯಿಗೆ ಬಡಿಗೆಯಿಂದ ಹೊಡೆದಿಲ್ಲ.

10. ನಾನು ಮುಖ್ಯ ಸಾಕ್ಷಿಯಲ್ಲಿ ಹೇಳಿದಂತೆ ಆರೋಪಿತರು ನನಗೆ, ಚಾಸಾ-10 ಹಾಗೂ 11 ಇವರ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವಾಚ್ಯ ಶಬ್ದಗಳಿಗಂದ ಬೈಯಿಲ್ಲ, ನಾನು ಚಾಸಾ-4 ಇವರಿಗೆ ಈ ವಿಷಯ ಹೇಳಿಲ್ಲ, ಚಾಸಾ-4 ಇವರು ಓಣಿಯ ಹಿರಿಯರಿಗೆ ಹೇಳಲು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಗೆ ನುಗ್ಗಿ ನನ್ನ ತಾಯಿಯನ್ನು ಹಾಗೂ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದ್ದುರು, ಕೈಗಳಿಂದ ಬಡಿಗೆಯಿಂದ ಹೊಡೆದರು, ಕೆಳಗೆ ಹಾಕಿ ಒದ್ದರು, ಸೀರೆ ಎಳೆದು ಅವಮಾನಿಸಿದರು, ಕುತ್ತಿಗೆ ಹಿಚುಕಿ ಕೊಲೆ ಮಾಡಲು ಪ್ರಯತ್ನಿಸಿದರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

11. ಚಾಸಾ-6 ಮತ್ತು 7 ಬಿಡಿಸಲು ಬಂದರು, ಆಗ ಆರೋಪಿತರು ಬಡಿಗೆಯನ್ನು ತೋರಿಸಿ ಜೀವಬೆದರಿಕೆ ಹಾಕಿದರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ನನ್ನ ಮೇಲೆ ದೂರು ನೀಡಬಹುದು ಎನ್ನುವ ಸಂಶಯದಿಂದ ನಾನು ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 05**
**ಚಾ.ಸಾ.ಸಂಖ್ಯೆಃ 01**

**ಪಾಟೀ ಸವಾಲುಃ** 1 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಐ.ಎಚ್. ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**